


ಕೊಹ್ಲಿ–ಧೋನಿ: ಪ್ರಬುದ್ಧತೆ–ಪ್ರತಿಭೆಯ ಅಪೂರ್ವ ಸಂಗಮ

ಭಾರತ ಮೆರೆದಾಡಲು ಸಾಧ್ಯವಾಯಿತು. ಆ ವಿಶ್ವಕಪ್‌ನಲ್ಲಿ ಭಾರತದ ಗೇಮ್‌ಪ್ಲಾನ್ ಅದ್ಭುತ. ಏಕೆಂದರೆ ಕೆಲ ಹಿರಿಯ ಆಟಗಾರರು ವಿದಾಯ ಹೇಳಿದ್ದರು. ಹೊಸ ಆಟಗಾರರು ಬಂದಿದ್ದರು. ಭಾರತೀಯ ಕ್ರಿಕೆಟ್ ಬದಲಾವಣೆಯ ಕಾಲಘಟ್ಟದಲ್ಲಿತ್ತು.

ಇಂಥ ಸಮಯದಲ್ಲಿ ತೆಂಡೂಲ್ಕರ್ ಅವರಂಥ ಮಾಗಿದ ಆಟಗಾರನ ಜೊತೆಗೆ ಧೋನಿ ಅವರ ಕೂಲ್ ನಾಯಕತ್ವ ಭಾರತ ತಂಡವನ್ನು ವಿಶ್ವ ಚಾಂಪಿಯನ್ ಆಗಿಸಿತು. ವೀರೇಂದ್ರ ಸೆಹ್ವಾಗ್ ಅವರ ಅಬ್ಬರ, ಯುವರಾಜ್ ಸಿಂಗ್ ಅವರ ಆಲ್‌ರೌಂಡ್ ಪ್ರದರ್ಶನ, ಜಹೀರ್ ಖಾನ್ ಅವರ ಸ್ವಿಂಗ್ ಎಸೆತಗಳು, ವಿರಾಟ್ ಕೊಹ್ಲಿ ಪ್ರವೇಶ ಯಾವುದೇ ತಂಡವನ್ನು ಸೋಲಿಸಬಹುದು ಎಂಬ ವಿಶ್ವಾಸ ಮೂಡಿಸಿತು.

## ಬ್ಯಾಟ್ಸ್‌ಮನ್‌ಗಳದ್ದೇ ಅಬ್ಬರ

ವಿಶ್ವಕಪ್‌ನಲ್ಲಿ ಬ್ಯಾಟ್ಸ್‌ಮನ್‌ಗಳದ್ದೇ ಅಬ್ಬರ. 90ರ ದಶಕದ ಬಳಿಕ ಸರಣಿ ಶ್ರೇಷ್ಠ ಪ್ರಶಸ್ತಿ ಆರಂಭಿಸಲಾಯಿತು. ಅಲ್ಲಿಯವರೆಗೆ ಪಂದ್ಯಶ್ರೇಷ್ಠ ಗೌರವ ಮಾತ್ರ ಕೊಡಲಾಗುತಿತ್ತು. 1992ರಲ್ಲಿ ಮಾರ್ಟಿನ್ ಕ್ರೋವ್ ಅದ್ಭುತ ಆಟವಾಡಿ ಮೊದಲ ಸರಣಿ ಶ್ರೇಷ್ಠ ಗೌರವಕ್ಕೆ ಪಾತ್ರರಾದರು. ಅವರು 456 ರನ್ ಸೇರಿಸಿದ್ದರು. 1996ರಲ್ಲಿ ಸನತ್ ಜಯಸೂರ್ಯ ಸರಣಿ ಶ್ರೇಷ್ಠರಾದರು. ಈ ವಿಶ್ವಕಪ್‌ನಲ್ಲಿ ಅವರು ಆಡಿದ ಆಟ ಸ್ಮರಣೀಯ. ಜೊತೆಗೆ ಏಕದಿನ ಕ್ರಿಕೆಟ್‌ನ ಆರಂಭಿಕ ಆಟಗಾರರ ಪಾತ್ರವನ್ನೇ ಬದಲಾಯಿಸಿತು.

## ವಿಶ್ವಕಪ್‌ಗೆ ಕ್ಷಣಗಣನೆ

ಈ ಬಾರಿಯ ವಿಶ್ವಕಪ್ ಇಂಗ್ಲೆಂಡ್‌ನಲ್ಲಿ ನಡೆಯಲಿದೆ. ಮೇ 30ರಿಂದ ಜುಲೈ 14ವರೆಗೆ ಕ್ರಿಕೆಟ್ ಅಭಿಮಾನಿಗಳ ಪಾಲಿಗೆ ಹಬ್ಬ. ಭಾರತ, ಆತಿಥೇಯ ಇಂಗ್ಲೆಂಡ್, ಪಾಕಿಸ್ತಾನ, ಶ್ರೀಲಂಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಅಫ್ಘಾನಿಸ್ತಾನ, ಬಾಂಗ್ಲಾದೇಶ ತಂಡಗಳು ಭಾಗವಹಿಸಲಿವೆ. ಭಾರತ–ಪಾಕಿಸ್ತಾನ ನಡುವಿನ ಪಂದ್ಯದತ್ತ ಎಲ್ಲರ ಚಿತ್ತ ನೆಟ್ಟಿದೆ. ಈ ಪಂದ್ಯ ಜೂನ್ 16ರಂದು ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯಲಿದೆ.



1979ರ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಆಟಗಾರರ ಸಂಭ್ರಮ

**ವಿಶ್ವಕಪ್‌ಗಳಲ್ಲಿ ಭಾರತದ ಸಾಧನೆ**

| ವಿಶ್ವಕಪ್ | ಸ್ಥಾನ |
|---|---|
| 1975 | ಗುಂಪು ಹಂತ |
| 1979 | ಗುಂಪು ಹಂತ |
| 1983 | ಚಾಂಪಿಯನ್ |
| 1987 | ಸೆಮಿಫೈನಲ್ |
| 1992 | ರೌಂಡ್ ರಾಬಿನ್ ಹಂತ |
| 1996 | ಸೆಮಿಫೈನಲ್ |
| 1999 | ಸೂಪರ್ ಸಿಕ್ಸ್ |
| 2003 | ರನ್ನರ್ ಅಪ್ |
| 2007 | ಗುಂಪು ಹಂತ |
| 2011 | ಚಾಂಪಿಯನ್ |
| 2015 | ಸೆಮಿಫೈನಲ್ |

ಟ್ವೆಂಟಿ–20 ಬಂದ ಮೇಲಂತೂ ಕ್ರಿಕೆಟ್ ಆಟವೇ ಬದಲಾಗಿದೆ. ಬ್ಯಾಟ್ಸ್‌ಮನ್‌ಗಳ ಆಟವಾಗಿ ಪರಿಣಮಿಸಿದೆ. ಕಾಪಿಬುಕ್ ಹೊಡೆತಗಳು ಹಳ್ಳ ಹಿಡಿದಿವೆ. ಇದು ಸಕಾರಾತ್ಮಕವೋ ನಕಾರಾತ್ಮಕವೋ ಎಂಬುದು ಲೆಕ್ಕಕ್ಕೆ ಬರುವುದಿಲ್ಲ. ಹಿಂದೆ ದೊಡ್ಡ ಮೊತ್ತದ ಆಟ ಮೂಡಿಬರುತ್ತಿರಲಿಲ್ಲ. ಅಬ್ಬಬ್ಬ ಎಂದರೆ 230–250 ರನ್‌ಗಳ ಸವಾಲು ದೊಡ್ಡ ಗುರಿಯಾಗಿತ್ತು. ಈಗ 400 ರನ್‌ಗಳ ಗುರಿಯೂ ಸೇಫ್ ಅಲ್ಲ!

ಈಗ ಭಾರತ ತಂಡ ಮತ್ತೊಂದು ಕಾರ್ಯಾಚರಣೆಗೆ ಸಿದ್ಧವಾಗಿದೆ. ವಿರಾಟ್ ಕೊಹ್ಲಿ